# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2577/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 18/1/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ವಿನಯ್ ಎಸ್.ಆರ್, ಗ್ರಾಮ ಲೆಕ್ಕಾಧಿಕಾರಿ, ಗುಡ್ಡೇತೋಟ ಸರ್ಕಲ್, ಭೈರೇದೇವರು ಗ್ರಾಮ, ಮೇಗುಂದಾ ಹೋಬಳಿ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಬಿ.ಎಸ್.ರಾಮಚಂದ್ರ ರಾವ್ ಬಿನ್ ಸಿಂಗಪ್ಪ ಹೆಬ್ಬಾರ್, ಭೈರೇದೇವರು ವಾಸ, ಶಾಂತಿಗ್ರಾಮ ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಸರ್ಕಾರಿ/ಸಾರ್ವಜನಿಕ ನೌಕರರಾದ ಶ್ರೀ.ವಿನಯ್ ಎಸ್.ಆರ್, ಗ್ರಾಮ ಲೆಕ್ಕಾಧಿಕಾರಿ, ಗುಡ್ಡೇತೋಟ ಸರ್ಕಲ್, ಭೈರೇದೇವರು ಗ್ರಾಮ, ಮೇಗುಂದಾ ಹೋಬಳಿ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಸರ್ಕಾರಿ ಉದ್ಯೋಗದಲ್ಲಿದ್ದು, ಅವರ ತಾಯಿಯ ಹೆಸರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದು, ಕೊಪ್ಪ ತಾಲ್ಲೂಕು, ಮೇಗುಂದ ಹೋಬಳಿ, ಹೆಗ್ಗಾರು ಗ್ರಾಮದ ಸ.ನಂ.83/ಪಿ3 ಮತ್ತು ಪಿ4 ರ (ಹೊಸ ಸ.ನಂ.207) ಭೂಮಿಯ ಸ್ಕೆಚ್ಚನ್ನು ತಿದ್ದಿ ಅಕ್ರಮವಾಗಿ ಟಿಂಬರ್ ಕಡಿತ ಮಾಡುತ್ತಿದ್ದಾರೆ. ಕೊಪ್ಪ ತಾಲ್ಲೂಕು, ಮೇಗುಂದ ಹೋಬಳಿ, ಭೈರೇದೇವರು ಗ್ರಾಮದ ಸ.ನಂ.255/ಪಿ2 ರಲ್ಲಿ ಇರುವ ದೂರುದಾರರ ವಾಸದ ಮನೆಯನ್ನು ಮತ್ತು ಜಾಗವನ್ನು ತಾನು ಕೊಂಡಿದ್ದೇನೆಂದು, ದೂರುದಾರರ ಕುಟುಂಬವನ್ನು ಸದರಿ ಮನೆಯಿಂದ ಹೊರಹಾಕಲು, ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು, ಪ್ರಯತ್ನ ಪಡುತ್ತಿದ್ದಾರೆಂಬ ಆಪಾದನೆ ಮಾಡಿ ದೂರು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರು ಮಾಡಿರುವ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ. ತನ್ನ ತಾಯಿಯ ಹೆಸರಿನಲ್ಲಿ ತಾನು ಯಾವುದೇ ರಿಯಲ್ ಎಸ್ಟೇಟ್ ಉದ್ಯಮವನ್ನು ನಡೆಸುತ್ತಿಲ್ಲ. ತನ್ನ ತಂದೆಯ ಮರಣಾನಂತರ ಬಂದಿರುವ ಸವಲತ್ತುಗಳಿಂದ ತಾಯಿ ಜಮೀನು ಖರೀದಿ ಮಾಡಿರುತ್ತಾರೆ. 2ನೇ ಆಪಾದನೆಗೆ ಸಂಬಂಧಪಟ್ಟಂತೆ ಭೂಮಿಯ ಸ್ಕೆಚ್ ತಿದ್ದುಪಡಿ ತಾನು ಮಾಡಿರುವುದಿಲ್ಲ. ತನ್ನ ತಾಯಿಯವರು

ನಿಯಮಾನುಸಾರ ಕಾನೂನು ಬದ್ಧವಾಗಿ ಸರ್ಕಾರದಿಂದ ಸ್ಕೆಚ್ ಪಡೆದು ವ್ಯವಹಾರ ಮಾಡಿರುತ್ತಾರೆ. ಶ್ರೀ.ರಾಮಚಂದ್ರರಾವ್ ಹಾಗೂ ದೂರುದಾರರ ಕುಟುಂಬವನ್ನು ಮನೆಯನ್ನು ಹೊರಹಾಕಲು ತಾನು ಪ್ರಯತ್ನಿಸಿಲ್ಲ. ದೂರುದಾರರು ಪೂರ್ವಾಗ್ರಹದಿಂದ ಅರ್ಜಿ ಬರೆದಿದ್ದು, ಈ ಹಿಂದೆಯೂ ಸಹ ಜಿಲ್ಲಾಧಿಕಾರಿಗಳಿಗೆ ತನ್ನ ವಿರುದ್ಧ ಒಂದು ದೂರು ಅರ್ಜಿ ಬರೆದಿದ್ದರು. ತದನಂತರ ಅವರೇ ಸ್ವಯಂ ಪ್ರೇರಿತರಾಗಿ ಆ ದೂರನ್ನು ವಾಪಸ್ ಪಡೆದಿರುತ್ತಾರೆಂದು ಹೇಳಿರುತ್ತಾರೆ.

4) ದೂರುದಾರರು ಹಾಜರು ಪಡಿಸಿರುವ ದಾಖಲೆಗಳಾದ ಕ್ರಯಪತ್ರವನ್ನು ಪರಿಶೀಲಿಸಲಾಗಿ, ಸದರಿ ಕ್ರಯಪತ್ರಗಳಂತೆ ಎದುರುದಾರರ ತಾಯಿಯವರು ಜಮೀನನ್ನು ಖರೀದಿ ಮಾಡಿರುವುದು ಕಂಡುಬರುತ್ತಿದೆ. ಎದುರುದಾರರು ಜಮೀನು ಖರೀದಿ ಮಾಡಿದ ಬಗ್ಗೆ ಕಂಡುಬರುತ್ತಿಲ್ಲ. ಎದುರುದಾರರು ತಾಯಿಯ ಹೆಸರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದಾರೆಂದು ದೂರುದಾರರು ಆರೋಪ ಮಾಡಿದ್ದು, ಸದರಿ ದೂರು ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ದೂರೆಂದು ಮೇಲ್ನೋಟಕ್ಕೆ ಕಂಡುಬಂದ ಕಾರಣ ದೂರುದಾರರ 1ನೇ ಆಪಾದನೆ ಬಗ್ಗೆ ಪೊಲೀಸ್ ವರಿಷ್ಠಾಧಿಕಾರಿ, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು, ಇವರಿಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು ಮತ್ತು 2ನೇ ಆಪಾದನೆಯಲ್ಲಿ ಎದುರುದಾರರು ಹೆಗ್ಗಾರು ಗ್ರಾಮದ ಸ.ನಂ.83/ಪಿ3 ಮತ್ತು 83/ಪಿ4 ರ ಹೊಸ ಸರ್ವೆ ನಂಬರ್ 207 ರ ಭೂಮಿಯ ಸ್ಕೆಚ್ ತಿದ್ದಿ ಅಕ್ರಮವಾಗಿ ಟಿಂಬರ್ ಕಡಿತ ಮಾಡುತ್ತಿರುತ್ತಾರೆಂದು ಆಪಾದನೆ ಇರುವ ಕಾರಣ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಕೊಪ್ಪ ತಾಲ್ಲೂಕು, ಇವರಿಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಆದೇಶಿಸಲಾಗಿತ್ತು.

5) ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರುದಾರರು ತನ್ನ ತಮ್ಮ ಬಿ.ಎಸ್.ನಾಗರಾಜ ರವರ ಬಾಬ್ತು ಸ.ನಂ.255/2 ರಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದು, ಸದರಿ ಜಮೀನನ್ನು ಸದರಿ ನಾಗರಾಜರವರು ಮಾರಾಟ ಮಾಡುತ್ತಿರುತ್ತಾರೆಂಬ ವಿಚಾರ ತಿಳಿದು ಅದನ್ನು ಅವರಿಗೆ ಮಾರಾಟ ಮಾಡುವಂತೆ ನಾಗರಾಜರವರನ್ನು ಕೇಳಿದ್ದು, ಆದರೆ ಸದರಿ ಜಮೀನನ್ನು ನಾಗರಾಜರವರು ವಿನಯ್‌ರವರ ತಾಯಿ ಸರೋಜಮ್ಮರವರಿಗೆ ಮಾರಾಟ ಮಾಡಿದ್ದರಿಂದ ಜಮೀನನ್ನು ದೂರುದಾರರಿಗೆ ಕ್ರಯ ಮಾಡಲಿಲ್ಲವೆಂಬ ದ್ವೇಷದಿಂದ ಅರ್ಜಿಯನ್ನು ಬರೆದಿರುತ್ತಾರೆ. ವಿನಯ್‌ರವರು ಅಕ್ರಮವಾಗಿ ರಿಯಲ್ ಎಸ್ಟೇಟ್ ದಂದೆ ಮಾಡುತ್ತಿರುತ್ತಾರೆಂಬ ಬಗ್ಗೆ ಸಾಕ್ಷಿ ಪುರಾವೆಗಳು ಇರುವುದಿಲ್ಲ ಮತ್ತು ಸ.ನಂ.83/ಪಿ3, 83/ಪಿ4 ರಲ್ಲಿರುವ ಜಮೀನು ಪ್ರತಿವಾದಿಯವರಾದ ವಿನಯ್, ಗ್ರಾಮ ಲೆಕ್ಕಾಧಿಕಾರಿಯವರ ತಾಯಿ ಶ್ರೀಮತಿ.ಸರೋಜಮ್ಮರವರ ಹೆಸರಿನಲ್ಲಿದ್ದು, ಸ್ಕೆಚ್ ತಿದ್ದುಪಡಿ ಮಾಡಿರುವ ಬಗ್ಗೆ ಯಾವುದೇ ಸಾಕ್ಷಿ ಪುರಾವೆಗಳು ಇರುವುದಿಲ್ಲ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

6) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೊಪ್ಪ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಭೂಮಿಯ ಸ್ಕೆಚ್ ತಿದ್ದಿ ಟಿಂಬರ್ ಕಡಿತ ಮಾಡಿರುವುದು ಸುಳ್ಳು ಎಂದು ಗೊತ್ತಾಗಿದ್ದರಿಂದ, ತಾನು ನೀಡಿದ ದೂರಿನಲ್ಲಿ ಮಾಹಿತಿ ಸುಳ್ಳು ಎಂದು ಒಪ್ಪಿಕೊಂಡಿರುತ್ತೇನೆ ಹಾಗೂ ವಿನಯ್‌ರವರ ಮೇಲೆ ಕೊಟ್ಟಿರುವ ದೂರನ್ನು ಸಮರ್ಥಿಸಿಕೊಳ್ಳಲು ತನ್ನಲ್ಲಿ ಯಾವುದೇ ದಾಖಲೆಗಳು

ಇಲ್ಲದೇ ಇರುವುದರಿಂದ ಹಾಗೂ ಶ್ರೀ.ವಿನಯ್‌ರವರಿಗೂ ಮತ್ತು ದೂರುದಾರರಿಗೂ ಜಮೀನಿನ ಸಂಬಂಧ ವ್ಯಾಜ್ಯ ನಡೆಯುತ್ತಿದ್ದು, ಅವರ ಮೇಲಿನ ಸಿಟ್ಟಿನಿಂದ ಅರ್ಜಿ ಸಲ್ಲಿಸಿರುವುದಾಗಿ ಅದರ ನಂತರದ ದಿನಾಂಕಗಳಲ್ಲಿ ದೂರುದಾರರ ಹಾಗೂ ವಿನಯ್ ಇವರ ಜಾಗದ ಸಂಬಂಧ ಹೊಂದಾಣಿಕೆ ಮಾಡಿಕೊಂಡಿದ್ದು, ದೂರನ್ನು ಹಿಂದಕ್ಕೆ ಪಡೆಯಲು ಸಿದ್ಧನಿರುತ್ತೇನೆಂದು ಹೇಳಿಕೆ ನೀಡಿರುತ್ತಾರೆಂದು ಹೇಳಿರುತ್ತಾರೆ.

7) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ರಿಯಲ್ ಎಸ್ಟೇಟ್ ದಂದೆ ಮಾಡುತ್ತಿಲ್ಲವೆಂದು ಅವರು ವರದಿಯನ್ನು ನೀಡಿರುವುದಾಗಿದೆ. ಪೊಲೀಸ್ ಉಪಾಧೀಕ್ಷಕರು ವಿಚಾರಣೆ ಸಮಯದಲ್ಲಿ ಎದುರುದಾರರು ಗಳಿಸಿರುವ ಒಟ್ಟು ಆದಾಯ, ಖರ್ಚು ಮತ್ತು ಅವರ ಚರ ಹಾಗೂ ಸ್ಥಿರ ಸ್ವತ್ತುಗಳ ಬಗ್ಗೆ ಮಾಹಿತಿಯನ್ನು ಕಲೆ ಹಾಕಿರುವುದು ಕಂಡುಬಂದಿರುವುದಿಲ್ಲ. ದೂರುದಾರರು ತನ್ನ ದೂರಿನಲ್ಲಿ ಎದುರುದಾರರು ತನ್ನ ತಾಯಿಯ ಹೆಸರಿನಲ್ಲಿ ಖರೀದಿಸಿರುವ ಹಲವಾರು ಜಮೀನುಗಳ ಬಗ್ಗೆ ಮಾಹಿತಿ ನೀಡಿದ್ದರೂ ಸಹ ಸದರಿ ಜಮೀನುಗಳ ಬಗ್ಗೆ ತನಿಖಾಧಿಕಾರಿ ಪರಿಶೀಲನೆ ನಡೆಸದಿರುವುದು ಕಂಡುಬರುತ್ತದೆ. ಆದ್ದರಿಂದ, ಪೊಲೀಸ್ ಉಪಾಧೀಕ್ಷಕರು ಸಲ್ಲಿಸಿರುವ ವರದಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

8) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೊಪ್ಪ ಇವರ ವರದಿಯನ್ನು ಪರಿಶೀಲಿಸಿದಾಗ, ಅವರು ಯಾವುದೇ ದಾಖಲಾತಿಗಳನ್ನು ಪರಿಶೀಲಿಸಿದ ಬಗ್ಗೆ ವರದಿಯಲ್ಲಿ ಉಲ್ಲೇಖವಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಕೂಡ ಹಾಜರು ಪಡಿಸಿರುವುದು ಕಂಡುಬಂದಿರುವುದಿಲ್ಲ. ಯಾವ ಜಮೀನಿನಲ್ಲಿ ಮರ ಕಡಿತಲೆ ಮಾಡಲು ಎದುರುದಾರರು ಪರವಾನಗಿಯನ್ನು ಪಡೆದುಕೊಂಡಿರುತ್ತಾರೆನ್ನುವ ಬಗ್ಗೆ ಮತ್ತು ಆ ಬಗ್ಗೆ ತಯಾರಿಸಿದ ಸ್ಕೆಚ್ ಹಾಗೂ ಇತರ ದಾಖಲಾತಿಗಳನ್ನು ಅರಣ್ಯ ಇಲಾಖೆಯಿಂದ ವಿಚಾರಣೆ ಮಾಡಿ ವಿಚಾರಣಾಧಿಕಾರಿ ಪಡೆದುಕೊಂಡಿರುವುದಿಲ್ಲ. ದೂರುದಾರರು ದೂರನ್ನು ಹಿಂಪಡೆಯುತ್ತೇನೆಂದು ಹೇಳಿರುವ ಆಧಾರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ವರದಿಯನ್ನು ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೊಪ್ಪ ಇವರ ವರದಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

9) ತನಿಖಾಧಿಕಾರಿಯ ವರದಿಯಲ್ಲಿ 2005ನೇ ಇಸವಿಯಲ್ಲಿ ಎದುರುದಾರರ ತಂದೆ ಸಣ್ಣ ನೀರಾವರಿ ಇಲಾಖೆಯಲ್ಲಿ ಗುಮಾಸ್ತರಾಗಿ ಕರ್ತವ್ಯದಲ್ಲಿದ್ದಾಗ, 2005ನೇ ಸಾಲಿನಲ್ಲಿ ಮೃತಪಟ್ಟಿದ್ದರಿಂದ ವಿನಯ್‌ರವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಸಿಕ್ಕಿರುವುದಾಗಿ ಉಲ್ಲೇಖಿಸಲಾಗಿದೆ. ಆದ್ದರಿಂದ, 2005 ರ ನಂತರ ಎದುರುದಾರರು ಹಾಗೂ ಅವರ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿರುವ ಎಲ್ಲಾ ಜಮೀನುಗಳ ಬಗ್ಗೆ ಪರಿಶೀಲನೆ ನಡೆಸಬೇಕಾಗುತ್ತದೆ. ದೂರುದಾರರು ತಮ್ಮ ದೂರಿನ ಜೊತೆ ದಿ.30/6/11 ರಂದು ಎದುರುದಾರರ ತಾಯಿಯ ಹೆಸರಿನಲ್ಲಿ ರೂ.6,90,000/- ಕ್ಕೆ ಹೆಗ್ಗಾರು ಗ್ರಾಮದ ಹಳೆ ಸ.ನಂ.83/ಪಿ4 ಹೊಸ ಸ.ನಂ.207 ರಲ್ಲಿ 3 ಎಕರೆ ಜಮೀನನ್ನು ಖರೀದಿ ಮಾಡಿರುವುದು ಕಂಡುಬರುತ್ತದೆ. ಅದೇರೀತಿ ದಿ.6/1/2014 ರಂದು ಎದುರುದಾರರು ಹಾಗೂ ಅವರ ತಾಯಿ ಶ್ರೀಮತಿ.ನಿರ್ಮಲ ಎನ್ನುವವರಿಗೆ ರೂ.1,80,000/- ಕ್ಕೆ ಭುವನಕೋಟೆ ಗ್ರಾಮದ ಸ.ನಂ.242

ರಲ್ಲಿ 3 ಎಕರೆ ಜಮೀನನ್ನು ಮಾರಾಟ ಮಾಡಿರುವುದು ಕಂಡುಬರುತ್ತದೆ. ಸದರಿ ಸ್ವತ್ತು ಎದುರುದಾರರ ತಾಯಿಯ ಹೆಸರಿಗೆ ದಿ.24/7/12 ರಂದು ನೋಂದಣಿಯಾಗಿರುವ ಬಗ್ಗೆ ಕ್ರಯಪತ್ರದಲ್ಲಿ ಉಲ್ಲೇಖ ಕಂಡುಬರುತ್ತದೆ. ದಿ.27/3/14 ರಂದು ಎದುರುದಾರರ ತಾಯಿ ಸರೋಜಮ್ಮರವರ ಹೆಸರಿಗೆ ರೂ.10,75,000/- ಕ್ಕೆ ಬೈರದೇವರು ಗ್ರಾಮದ ಸ.ನಂ.255/2 ರಲ್ಲಿ 2 ಎಕರೆ 30 ಗುಂಟೆ ಜಮೀನನ್ನು ಖರೀದಿ ಮಾಡಿರುವುದು ಕಂಡುಬರುತ್ತದೆ. ದಿ.30/6/11 ರಂದು ಎದುರುದಾರರ ತಾಯಿ ಸರೋಜಮ್ಮರವರ ಹೆಸರಿಗೆ ರೂ.4,60,000/- ಕ್ಕೆ ಹೆಗ್ಗಾರು ಗ್ರಾಮದ ಹಳೆ ಸ.ನಂ.83/ಪಿ3 ಮತ್ತು ಹೊಸ ಸ.ನಂ.207 ರಲ್ಲಿ 2 ಎಕರೆ ಜಮೀನು ಖರೀದಿ ಮಾಡಿರುವುದು ಕಂಡುಬರುತ್ತದೆ.

10) ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಸರ್ಕಾರಿ ನೌಕರಿಯಲ್ಲಿದ್ದ ಸಮಯದಲ್ಲಿ ಮೇಲಿನ ಸ್ವತ್ತುಗಳನ್ನು ಖರೀದಿ ಮಾಡಿರುವುದು ಕಂಡುಬರುತ್ತದೆ. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಂದೆಯ ಮರಣಾನಂತರ ಬಂದಿರುವ ಸವಲತ್ತುಗಳಿಂದ ತಾಯಿ ಜಮೀನು ಖರಿದಿ ಮಾಡಿರುತ್ತಾರೆಂದು ತಿಳಿಸಿದ್ದು, ಆದರೆ ತಂದೆ ಮರಣಾನಂತರ ಏನೆಲ್ಲಾ ಸವಲತ್ತುಗಳು ತಾಯಿಗೆ ಬಂದಿರುತ್ತವೆ ಮತ್ತು ದೂರುದಾರರು ದೂರಿನಲ್ಲಿ ನಮೂದಿಸಿರುವ ಜಮೀನುಗಳನ್ನು ತಾಯಿಯ ಹೆಸರಿನಲ್ಲಿ ಖರೀದಿಸಲು ಆದಾಯದ ಮೂಲ ಯಾವುದು ಎನ್ನುವ ಬಗ್ಗೆ ಎದುರುದಾರು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಎದುರುದಾರರ ತಾಯಿಗೆ ಜಮೀನು ಖರೀದಿಸಲು ಯಾವುದೇ ಆದಾಯವಿರುವ ಬಗ್ಗೆ ಎದುರುದಾರರು ತಿಳಿಸಿರುವುದಿಲ್ಲ ಮತ್ತು ಸದರಿ ಸ್ವತ್ತುಗಳನ್ನು ಖರೀದಿಸಲು ಎದುರುದಾರರ ತಾಯಿಯ ಬಳಿ ಕ್ರಯಪತ್ರದಲ್ಲಿ ನಮೂದಿಸಿರುವಷ್ಟು ಮೊತ್ತ ಇತ್ತು ಎನ್ನುವುದನ್ನು ತೋರಿಸಲು ಎದುರುದಾರು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಅಕ್ರಮವಾಗಿ ತಾಯಿಯ ಹೆಸರಿನಲ್ಲಿ ಜಮೀನನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೆ ಸ್ಕೆಚ್ ತಿದ್ದಿ ಟಿಂಬರ್ ಕಡಿತ ಮಾಡಿರುವ ಆಪಾದನೆ ಬಗ್ಗೆ ಕೂಡ ಎದುರುದಾರರು ಸೂಕ್ತವಾದ ರೀತಿಯಲ್ಲಿ ಯಾವುದೇ ಸಮಜಾಯಿಷಿಯನ್ನು ನೀಡಿರುವುದಿಲ್ಲ. ಟಿಂಬರ್ ವ್ಯವಹಾರವನ್ನು ಮಾಡಲೂ ಸಹ ಇಲಾಖಾ ಅನುಮತಿಯನ್ನು ಪಡೆದಿರುವ ಬಗ್ಗೆ ಎದುರುದಾರರು ಯಾವುದೇ ಸಮಜಾಯಿಷಿಯನ್ನು ನೀಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ.

11) ಮೇಲಿನ ಎಲ್ಲಾ ಅಂಶಗಳನ್ನು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಪಡಿಸಿಕೊಂಡಿಸಿಕೊಂಡು, ಕೆ.ಸಿ.ಎಸ್.ಆರ್.ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿ ತನ್ನ ತಾಯಿಯ ಹೆಸರಿನಲ್ಲಿ ಹಲವಾರು ಸ್ವತ್ತುಗಳನ್ನು ಖರೀದಿಸಿದ್ದು, ಸ್ವತ್ತುಗಳನ್ನು ಖರೀದಿಸುವಾಗ ಮತ್ತು ಮಾರಾಟ ಮಾಡುವಾಗ ಹಾಗೂ ಟಿಂಬರ್ ವ್ಯವಹಾರವನ್ನು ಮಾಡಲೂ ಸಹ ಇಲಾಖೆಯಿಂದ ಅನುಮತಿ ಪಡೆಯದಿರುವುದರಿಂದ ಅವರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

12) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರು ತನ್ನ ಅಧಿಕಾರ ದುರುಪಯೋಗ ಪಡಿಸಿಕೊಂಡು ತನ್ನ ತಾಯಿಯ ಹೆಸರಿನಲ್ಲಿ ಅಕ್ರಮ ಆಸ್ತಿಯನ್ನು ಹೊಂದಿರುವ ಬಗ್ಗೆ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಭ್ರಷ್ಟಾಚಾರ ನಿಗ್ರಹ ದಳ, ಇವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 18/1/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**